

ಮಟ್ಟಿಗೆ ಹಾಸ್ಟೆಲ್ಲಿನ ಹೊಟ್ಟೆ ತುಂಬಿಸುವುದಕ್ಕೆ ಸಾಕಾಗುತ್ತದೆ. ಸಹಜವಾಗಿ ಇದರದೂ ನಾಯಕ ಅರಿಹಂತ. ಪ್ರತೀ ಮಂಗಳವಾರ ಬೆಳಗ್ಗೆ ಅವನು ನಾಲ್ಕು ಗಂಟೆಗೆ ಎದ್ದು ಮಹಡಿಯ ಮೆಟ್ಟಿಲು ಹತ್ತಿ ಬಂದು ಅಂದು ಯಾರ ಸರದಿಯಿದೆಯೋ ಆ ಜ್ಯೂನಿಯರನ ಕೋಣೆಯ ಬಾಗಿಲನ್ನು ಎರಡು ಬೆರಳಿನಲ್ಲಿ ಮೂರು ಬಾರಿ ಟಕ್ ಟಕ್ ಟಕ್ ಎಂದು ತಟ್ಟುತ್ತಾನೆ. ಆ ಸದ್ದಿಗೆ ರಪ್ಪಂತ ಎದ್ದು ಅವನ ಹಿಂದೆ ಹೊರಟುಬಿಡಬೇಕು. ಅವನು ಕರೆದುಕೊಂಡು ಹೋಗುವ ಕಾಡುಮೇಡು ದಾರಿಗಳನ್ನೆಲ್ಲಾ ದಾಟಿ ಎಪಿಎಂಸಿ ತಲುಪಬೇಕು. ಅಲ್ಲಿ ಅವನು ಹೋಗಿ ಫುಡ್ ಇನ್ಸ್‌ಪೆಕ್ಟರ್ ತರಹ ಠೀವಿಯಿಂದ ಕೆಜಿಗಟ್ಟಲೆ ತರಕಾರಿಗಳನ್ನು ಕೈ ಸನ್ನೆ ಮಾಡಿ ಆರಿಸುತ್ತಿದ್ದರೆ, ಪಕ್ಕದಲ್ಲಿ ಆ ಜ್ಯೂನಿಯರು ಮೂಟೆಯ ಬಾಯನ್ನು ಅಗಲಿಸಿಕೊಂಡು ನಿಂತಿರಬೇಕು. ಎರಡೂ ಮೂಟೆಗಳು ತುಂಬಿದ ಮೇಲೆ ಅರಿಹಂತ ಆಟೋ ಸತೀಶನಿಗೆ ಮಿಸ್ ಕಾಲ್ ಕೊಡುತ್ತಾನೆ. ಮೂಟೆಯನ್ನು ಎತ್ತಿ ಆಟೋದಲ್ಲಿ ಹಾಕುವುದಾಗಲೀ, ಹಾಸ್ಟೆಲ್ಲಿನ ಎದುರು ಇಳಿಸಿ, ಮಣಭಾರದ ಅವುಗಳನ್ನು ಎತ್ತಿ ಅಡುಗೆಮನೆಯೊಳಗೆ ಸಾಗಿಸುವುದಾಗಲೀ ಇವುಗಳನ್ನು ಜ್ಯೂನಿಯರು ಒಬ್ಬನೇ ಮಾಡಬೇಕು. ಆಕಾಶ ತಲೆ ಕೆಳಗಾಗಿ ಬಿದ್ದರೂ 'ಅಣ್ಣಾ ಒಂಚೂರ್ ಕೈ ಹಾಕಿ' ಎಂದು ಸಹಾಯ ಕೇಳುವಂತಿಲ್ಲ.

ಆಟೋದಿಂದ ಮೂಟೆಗಳನ್ನು ಇಳಿಸಿ ಅಡುಗೆಮನೆಯಲ್ಲಿ ಹೊತ್ತಾಕಿ ಅರೆನಿದ್ರೆ, ಸುಸ್ತು, ನೋವಿನಿಂದ ಜರ್ಝರಿತವಾಗಿದ್ದ ಮೈಯನ್ನು ಮುರಿಯುತ್ತಾ ಕೋಣೆಗೆ ಹೋದ ಸಂದೀಪನಿಗೆ ಭರತ ಜೋರಾಗಿ ಗೊರಕೆ ಹೊಡೆಯುತ್ತಾ ಮಲಗಿರುವುದು ಕಂಡಿತು. ಅವತ್ತು ಒಲೆ ಉರಿ ಹಾಕುವ ಸರದಿ ಭರತನದ್ದೇ, ಹಾಕಿದ್ದ ಕೂಡಾ. ಎಪಿಎಂಸಿ ಯಾರ್ಡಿನ ಬಾಗಿಲ ಬಳಿ ಲಾರಿಯೊಂದು ಹಾಳಾಗಿ ಸಣ್ಣ ಟ್ರಾಫಿಕ್ ಜಾಮ್ ಆಗಿ ಇವರ ಆಟೋ ಬರಲು ಜಾಗ ಸಾಲದೇ ರಸ್ತೆಯವರೆಗೆ ಎರಡೂ ಮೂಟೆಗಳನ್ನು ಹೊತ್ತುಕೊಂಡು ಬಂದ ಸುಸ್ತು, ಅಲ್ಲಿಯೂ ಸಹಾಯಹಸ್ತ ಚಾಚದ ಅರಿಹಂತನ ಮೇಲೆ ಸಿಟ್ಟು, ಕಾಲೇಜಿಗೆ ತಡವಾಗಿರುವ ಅವಸರ ಎಲ್ಲವೂ ಒಟ್ಟು ಸೇರಿತ್ತು. ನಿದ್ರೆಯಲ್ಲಿದ್ದ ಭರತನನ್ನು ಬಡಿದೆಬ್ಬಿಸಿದ ಸಂದೀಪ, 'ಒಲೆ ಉರಿ ಹಾಕ್ ಮಲ್ಕಂಡಿದ್ಯಲ್ಲೋ, ಬೇಗ್ ಸ್ನಾನಕ್ ಹೋಗೋ ಮಾರಾಯಾ' ಎಂದು ಗದರಿದ. 'ಫಸ್ಟ್ ಪಿರಿಯಡ್ ಬಂಕ್ ಮಗಾ, ನಾ ಹೋಗಲ್ಲ' ಎಂದು ಅವನು ಮಗ್ಗುಲು ಬದಲಿಸಿ ಮಲಗಿದ. ಮತ್ತೆ ಅವನನ್ನು ಎಬ್ಬಿಸಿ ಸ್ನಾನಕ್ಕೆ ಕಳಿಸುವಷ್ಟು ತಾಳ್ಮೆ ಸಂದೀಪನಿಗಿರಲಿಲ್ಲ. 'ನಾನ್ ಹೋಗ್ತೀನಿ ಇವಾಗ ಸ್ನಾನಕ್ಕೆ' ಎಂದ. ಭರತ ಹೂಂ ಎಂದು ಗುನುಗುವ ಮೊದಲೇ ಸಂದೀಪ ಬಕೆಟ್ ತೆಗೆದುಕೊಂಡು ಬಿಸಿನೀರು ಹಿಡಿಯುತ್ತಿದ್ದ. ಕೇವಲ ಒಂದು ಬಕೆಟ್ ತುಂಬಿಸಿಕೊಂಡು ಶಾಸ್ತ್ರಕ್ಕೆ ಸ್ನಾನ ಮಾಡಿ ಕಾಲೇಜ್ ಬಸ್ ಹತ್ತುವುದಷ್ಟೇ ಅವನ ಗುರಿಯಾಗಿತ್ತು. ಫಿಲ್ಟರಿನಲ್ಲಿ ಕೊಳೆ ಕೂತು ನೀರು ಒಂದೇ ಹೊನಲಾಗಿ ಬರದೇ ತೂತುಗಳಾಗಿರುವ ಹೆಂಚಿನ ಮೂಲಕ ಅಲ್ಲಲ್ಲಿ ಕಿರಣಗಳು ಒಳಬಂದಂತೆ ನಾಲ್ಕೈದು ಸಣ್ಣ ಸಣ್ಣ ಝರಿಗಳಾಗಿ ನಿಧಾನಕ್ಕೆ